# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ಸಿ ನಂ. 22/2021**

**ದೋ.ಸಾ. : 7 ಪ್ರಾ.ಸಾ. : 1**

| | | |
|---|---|---|
| ಸಾಕ್ಷಿಯ ಹೆಸರು | : | ಮಹಮ್ಮದ ಅಲಿ ಅಬ್ದುಲ್ ಗಫಾರ್ ಶೇಖ |
| ತಂದೆಯ ಹೆಸರು | : | ಅಬ್ದುಲ್ ಗಫಾರ್ ಶೇಖ |
| ವಯಸ್ಸು | : | 49 ವರ್ಷ |
| ಕೆಲಸ | : | ವ್ಯವಹಾರ |
| ವಾಸ | : | ಅಶೂರಖಾನಾಗಲ್ಲಿ, ಹೊನ್ನಾವರ |

**ದಿನಾಂಕಃ 24-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ದಿನಾಂಕಃ 03-05-2021 ರಂದು ರಾತ್ರಿ ನಾನು ಮತ್ತು ಚಾಸಾ 6 ರವರು ಮೆಡಿಸಿನ್ ತರಲು ಹೊನ್ನಾವರದ ತುಳಸಿ ಫಾರ್ಮಸಿ ಗೆ ಹೋಗಿದ್ದೆವು. ಅಲ್ಲಿ ಪೋಲೀಸರು ನಮಗೆ ಪಂಚರಾಗಿ ಬರುವಂತೆ ನೋಟೀಸು ನೀಡಿದರು. ಅದರಂತೆ, ನಾವು ಹೊನ್ನಾವರ ಪೋಲೀಸ್ ಠಾಣೆಗೆ ಹೋದೆವು. ನಾವು ಅಲ್ಲಿಗೆ ಹೋದಾಗ, ಪೋಲೀಸರು ಹಾಗೂ ಆರೋಪಿ ಠಾಣೆಯಲ್ಲಿದ್ದರು. ಅಲ್ಲಿ ಆರೋಪಿಯು ಅಬುತಾಲೀಬ್ ಎನ್ನುವವರನ್ನು ಕೊಲೆ ಮಾಡುವಾಗ, ಧರಿಸಿದ ನೀಲಿ ಬಣ್ಣದ ಶರ್ಟ ನ್ನು ಆತನಿಂದ ಬಿಚ್ಚಿಸಿ, ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡರು. ಸದ್ರಿ ಶರ್ಟಗೆ ರಕ್ತದ ಕಲೆಗಳಾಗಿರುತ್ತದೆ. ಪೋಲೀಸರು ಆ ಶರ್ಟ ನ್ನು ಒಂದು ಕವರ್ ನಲ್ಲಿ ಹಾಕಿ, ಬಟ್ಟೆಸುತ್ತಿ, ಸೀಲ್ ಮಾಡಿ ನಮ್ಮ ರುಜುವನ್ನು ಪಡೆದುಕೊಂಡರು. ಆಗ ಸಮಯ ರಾತ್ರಿ 11.00 ರಿಂದ 11.50 ಗಂಟೆ ಆಗಿತ್ತು. ಶರ್ಟ ನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ಪೋಲೀಸರು ಜಪ್ತು ಪಂಚನಾಮೆ ಮಾಡಿ, ನಮ್ಮ ರುಜುವನ್ನು ಪಡೆದುಕೊಂಡರು ಹಾಗೂ ಛಾಯಾಚಿತ್ರವನ್ನು ತೆಗೆದರು. ಸಾಕ್ಷಿಯು ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ರುಜುವನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

ಸಾಕ್ಷಿಯು ಪೋಲೀಸರು ತನಗೆ ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 3 ಎಂದು, ಸಾಕ್ಷಿಯ ರುಜುವನ್ನು ನಿಪಿ 3(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಒಂದು ಸೀಲಾದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತು ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)**

ಸಾಕ್ಷಿಯು ಆರೋಪಿಯಿಂದ ಜಪ್ತು ಪಡಿಸಿಕೊಂಡ ಶರ್ಟನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 1 ಎಂದು, ಅದಕ್ಕೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ರುಜುವನ್ನು ಮು. ಮಾ. 1 (ಎ) ಎಂದು ಗುರುತಿಸಲಾಯಿತು. ಠಾಣೆಯಲ್ಲಿ ಆ ದಿನ ನೋಡಿದ ಆರೋಪಿ ಈ ದಿನ ನ್ಯಾಯಾಲಯದ ಮುಂದಿರುತ್ತಾನೆ. ನಾವು ಠಾಣೆಯಿಂದ ಹೊರಡುವಾಗ, ಪೋಲೀಸರು ನಾಳೆ ಅವಶ್ಯಕತೆ ಇದ್ದರೆ ಮತ್ತೆ ಕರೆಸುತ್ತೇವೆ ಎಂದು ಹೇಳಿದ್ದರು.

ಮಾರನೇ ದಿನ ದಿನಾಂಕಃ 04-05-2021 ರಂದು ಬೆಳಿಗ್ಗೆ 7.30 ಕ್ಕೆ ಪೋಲೀಸರು ನಮಗೆ ಫೋನ್ ಮಾಡಿ, ನಮ್ಮನ್ನು ಬರುವಂತೆ ಹೇಳಿದ್ದು, ಅದರಂತೆ ನಾವು ಪೋಲೀಸ್ ಠಾಣೆಗೆ ಹೋದೆವು. ನಾವು ಅಲ್ಲಿ ಹೋದಾಗ, ಪೋಲೀಸರು ಹಾಗೂ ಆರೋಪಿ ಠಾಣೆಯಲ್ಲಿದ್ದರು. ಅಲ್ಲಿ ಪೋಲೀಸರು ನಮಗೆ ಪಂಚನಾಮೆಗೆ ಬರುವಂತೆ ನೋಟೀಸನ್ನು ನೀಡಿರುತ್ತಾರೆ. ಆರೋಪಿ ತಾನು ಕೊಲೆ ಮಾಡಲು ಬಳಸಿದ ಚಾಕು ಹಾಗೂ ತಾನು ತೊಟ್ಟ ಲುಂಗಿಯನ್ನು ತೋರಿಸುತ್ತೇನೆಂದು ಹೇಳಿದ ಮೇರೆಗೆ, ಪೋಲೀಸರು ನಮ್ಮನ್ನು ತಮ್ಮ ಜೀಪ್ ನಲ್ಲಿ ಚಂದಾವರಕ್ಕೆ ಕರೆದುಕೊಂಡು ಹೋದರು. ನಾವು ಚಂದಾವರಕ್ಕೆ ತಲುಪಿದಾಗ, ಒಂದು ಟಾರ್ ರಸ್ತೆಯ ನಂತರ, ಮಣ್ಣಿನ ರಸ್ತೆಯಲ್ಲಿ ಆರೋಪಿಯು ಜೀಪ್ ನ್ನು ನಿಲ್ಲಿಸಲು ಹೇಳಿದ್ದು, ಅದರಂತೆ, ಪೋಲೀಸರು ಜೀಪ್ ನ್ನು ನಿಲ್ಲಿಸಿರುತ್ತಾರೆ. ನಂತರ, ನಾವು ಸ್ವಲ್ಪ ದೂರ ನಡೆದುಕೊಂಡು ಹೋದೆವು. ಅಲ್ಲಿ ಒಂದು ಸೇತುವೆ ಕೆಳಗೆ ಆರೋಪಿ ತಾನು ಬಚ್ಚಿಟ್ಟ ಚಾಕು ಹಾಗೂ ಲುಂಗಿಯನ್ನು ತೋರಿಸಿದನು. ಅವುಗಳನ್ನು ಚೀಲದಲ್ಲಿ ಇಡಲಾಗಿತ್ತು. ಪೋಲೀಸರು ಅವುಗಳನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಡರು. ಪೋಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ, ನಕಾಶೆ ತಯಾರಿಸಿ ಹಾಗೂ ಛಾಯಾಚಿತ್ರಗಳನ್ನು ತೆಗೆದರು. ಆಗ ಆರೋಪಿಯು ಅಲ್ಲಿಯೇ ಪಕ್ಕದಲ್ಲಿದ್ದ ಹೊಂಡವನ್ನು ತೋರಿಸಿ, ಚಾಕು ಹಾಗೂ ಲುಂಗಿಗೆ ಆದ ರಕ್ತದ ಕಲೆಗಳನ್ನು ತೊಳೆದಿರುತ್ತೇನೆ ಎಂದು ಹೇಳಿದ ಹಾಗೂ ಅದೇ ಸ್ದಳದಲ್ಲಿ ತನ್ನ ಶರ್ಟನ್ನು ತೊಳೆದು,

ಪುನಃ ಧರಿಸಿಕೊಂಡೆ ಎಂದು ಹೇಳಿದ. ನಂತರ, ಪೋಲೀಸರು ಚಾಕು, ಲುಂಗಿಯನ್ನು ಹಾಗೂ ಚೀಲವನ್ನು ಪ್ರತ್ಯೇಕ ಕವರ್ ನಲ್ಲಿ ಹಾಕಿ, ಬಟ್ಟೆ ಸುತ್ತಿ, ಸೀಲ್ ಮಾಡಿ, ನಮ್ಮ ರುಜು ಪಡೆದುಕೊಂಡರು. ಸಾಕ್ಷಿಯು ಸದ್ರಿ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 4 ಎಂದು, ಸಾಕ್ಷಿಯ ರುಜುವನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 3 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 5 ರಿಂದ 7 ಎಂದು ಗುರುತಿಸಲಾಯಿತು. ನಿಪಿ 5 ರಂತೆ ಚಾಕುವನ್ನು ಜಪ್ತುಪಡಿಸಿಕೊಳ್ಳಲಾಯಿತು. ನಿಪಿ 6 ರಂತೆ ಲುಂಗಿಯನ್ನು ಜಪ್ತುಪಡಿಸಿಕೊಳ್ಳಲಾಯಿತು. ನಿಪಿ 7 ರಲ್ಲಿ ಆರೋಪಿ ನೀರು ಇರುವ ಹೊಂಡವನ್ನು ತೋರಿಸುತ್ತಿದ್ದಾನೆ. ಸಾಕ್ಷಿಯು ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 8 ಎಂದು, ಸಾಕ್ಷಿಯ ರುಜುವನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಲೀಸರು ತನಗೆ ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 9 ಎಂದು, ಸಾಕ್ಷಿಯ ರುಜುವನ್ನು ನಿಪಿ 9(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಮೂರು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)**

ಸಾಕ್ಷಿಯು ಆ ದಿನ ಆರೋಪಿ ತೋರಿಸಿದ ಚಾಕು, ಲುಂಗಿ ಹಾಗೂ ಚೀಲವನ್ನು ನೋಡಿ ಗುರುತಿಸಿದ್ದು, ಚಾಕುವನ್ನು ಮು. ಮಾ. 2 ಎಂದು, ಅದಕ್ಕೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ರುಜುವನ್ನು ಮು. ಮಾ. 2(ಎ) ಎಂದು, ಲುಂಗಿಯನ್ನು ಮು. ಮಾ. 3 ಎಂದು, ಅದಕ್ಕೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ರುಜುವನ್ನು ಮು. ಮಾ. 3(ಎ) ಎಂದು, ಚೀಲವನ್ನು ಮು. ಮಾ. 4 ಎಂದು, ಅದಕ್ಕೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ರುಜುವನ್ನು ಮು. ಮಾ. 4(ಎ) ಎಂದು ಗುರುತಿಸಲಾಯಿತು. ಠಾಣೆಯಲ್ಲಿ ಆ ದಿನ ನೋಡಿದ ಆರೋಪಿ ಈ ದಿನ ನ್ಯಾಯಾಲಯದ ಮುಂದಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ – LADC ವಕೀಲರಿಂದ**

ನಾನು ದ್ವಿತೀಯ ಪಿ.ಯು.ಸಿ. ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಅಶೂರಾಖಾನಾಗಲ್ಲಿಯಿಂದ ಪೋಲೀಸ್ ಠಾಣೆ ಅರ್ಧ ಕಿ. ಮೀ. ದೂರ ಇದೆ.

ಅಶೂರಾಖಾನಾಗಲ್ಲಿಯಲ್ಲಿ ಮಾರ್ಕೆಟ್ ಹಾಗೂ ಅಂಗಡಿಗಳು ಇರುತ್ತವೆ ಎಂದರೆ ಸರಿ. ಹೊನ್ನಾವರ ಪೋಲೀಸ್ ಠಾಣೆಯ ಹತ್ತಿರ ಜನ ಓಡಾಡುವ ಪ್ರದೇಶ ಎಂದರೆ ಸರಿ. ದಿನಾಂಕಃ 03-05-2021 ರ ರಾತ್ರಿ ನಮ್ಮನ್ನು ಪಂಚನಾಮೆಗೆ ಕರೆದ ಪೋಲೀಸರ ಹೆಸರು ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲ. ಪೋಲೀಸರಿಗೆ ನಾನು ಪಂಚನಾಮೆಯನ್ನು ಹೇಳಿ ಬರೆಸಿಲ್ಲ. ನಾವು ಠಾಣೆಗೆ ಹೋಗುವ ಮೊದಲೇ ಪೋಲೀಸರು ನಿಪಿ 1 ನ್ನು ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಮ್ಮ ಸಮಕ್ಷಮ ಯಾವುದೇ ಶರ್ಟನ್ನು ಪೋಲೀಸರಿಗೆ ನೀಡಿಲ್ಲ ಎಂದರೆ ಸರಿ ಅಲ್ಲ. ಮು. ಮಾ. 1 ರಲ್ಲಿ ಎಷ್ಟು ಬಟನ್ ಗಳು ಇವೆ ಎಂದು ನನಗೆ ಹೇಳಲು ಬರುವುದಿಲ್ಲ. ಮು. ಮಾ. 1 ಶರ್ಟ ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಪೋಲೀಸರು ಮೊದಲೇ ತಯಾರಿಸಿಟ್ಟಿದ್ದ ಪಂಚನಾಮೆಗೆ ನಾನು ರುಜು ಮಾಡಿರುತ್ತೇನೆ ಎಂದರೆ ಸರಿ ಅಲ್ಲ. ಮು. ಮಾ. 1 ಶರ್ಟ ಆರೋಪಿಗೆ ಸೇರಿದ್ದು ಎಂದು ಹೇಳಲು ಅದರ ಮೇಲೆ ಯಾವುದೇ ಗುರುತು ಮಾಡಿಲ್ಲ ಎಂದರೆ ಸರಿ ಅಲ್ಲ. ಮು. ಮಾ. 1 ರ ಮೇಲೆ ಪೋಲೀಸರು ಚೀಟಿಯನ್ನು ಅಂಟಿಸಿದರು. ಮು. ಮಾ. 1 ರ ಮೇಲೆ ಪೋಲೀಸರು ನನ್ನ ಸಮಕ್ಷಮ ಯಾವುದೇ ಚೀಟಿಯನ್ನು ಅಂಟಿಸಿಲ್ಲ ಎಂದರೆ ಸರಿ ಅಲ್ಲ. ನಿಪಿ 2 ನ್ನು ಯಾಕೆ ತೆಗೆದರು ಎಂದು ಗೊತ್ತಿಲ್ಲ ಎಂದರೆ ಸರಿ ಅಲ್ಲ.

ಚಂದಾವರಕ್ಕೆ ಪೋಲೀಸರು ನಮ್ಮನ್ನು ಕರೆದುಕೊಂಡು ಹೋದರು ಎಂದರೆ ಸರಿ. ಪೋಲೀಸರ ಜೀಪ್ ನಲ್ಲಿ ನಾನು, ಚಾಸಾ 6 ಹಾಗೂ ಪೋಲೀಸರು ಹೋಗಿರುತ್ತೇವೆ. ಆರೋಪಿ ಇದ್ದ ವ್ಯಾನ್ ನಮ್ಮ ಜೀಪ್ ನ ಹಿಂದೆ ಬರುತ್ತಿತ್ತು. ನಿಪಿ 4 ಪಂಚನಾಮೆಯನ್ನು ಚಂದಾವರದ ಸೇತುವೆ ಕೆಳಗೆ ಬರೆದರು. ದಿನಾಂಕಃ 04-05-2021 ರಂದು ಬೆಳಿಗ್ಗೆ 8.00 ಗಂಟೆಗೆ ನಾವು ಠಾಣೆಗೆ ಹೋದೆವು. ಅಲ್ಲಿಗೆ ಹೋದ 10 ನಿಮಿಷದಲ್ಲಿ ಚಂದಾವರಕ್ಕೆ ಹೊರಟೆವು. ಪೋಲೀಸ್ ಠಾಣೆಯಿಂದ ಚಂದಾವರಕ್ಕೆ 15 ನಿಮಿಷ ದೂರ ಇದೆ. ಚಂದಾವರದ ಪಂಚನಾಮೆ ಸ್ಥಳಕ್ಕೆ ತಲುಪಲು ಅರ್ಧ ಗಂಟೆ ಆಯಿತು. ನಿಪಿ 4 ನ್ನು ಪೋಲೀಸರೇ ಬರೆದರು. ಆರೋಪಿ ನಮ್ಮ ಸಮಕ್ಷಮ ಮು. ಮಾ. 2, 3 ಮತ್ತು 4 ನ್ನು ತೋರಿಸಿಲ್ಲ ಎಂದರೆ ಸರಿ ಅಲ್ಲ. ಆರೋಪಿ ನಮ್ಮನ್ನು ಚಂದಾವರದ ಪಂಚನಾಮೆ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ಅಲ್ಲಿ ಪೋಲೀಸರು ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ನಕಾಶೆ ತಯಾರಿಸಿಲ್ಲ, ಛಾಯಾಚಿತ್ರ ತೆಗೆದಿಲ್ಲ ಹಾಗೂ ಮು. ಮಾ. 2 ರಿಂದ 4 ಗಳನ್ನು ವಶಪಡಿಕೊಂಡಿಲ್ಲ ಎಂದರೆ ಸರಿ ಅಲ್ಲ. ಮು. ಮಾ. 3 ಲುಂಗಿ ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ, ಸಾಕ್ಷಿಯು ಮು. ಮಾ. 3 ಲುಂಗಿಯನ್ನು ಆರೋಪಿಯೇ ನಮ್ಮ ಸಮಕ್ಷಮ ತೋರಿಸಿದ ಎಂದು ನುಡಿಯುತ್ತಾರೆ. ಪೋಲೀಸರು ನಮಗೆ ಯಾವುದೇ ನೋಟೀಸು ನೀಡಿರುವುದಿಲ್ಲ ಎಂದರೆ ಸರಿ ಅಲ್ಲ. ಚಾಸಾ 14 ರವರು ನನಗೆ ಪರಿಚಯ. ಆಕೆಯ ಗಂಡ ಹೊರದೇಶದಲ್ಲಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ 14 ರವರು ನನಗೆ ಪರಿಚಯ

ಇರುವುದರಿಂದ, ಅವರಿಗೆ ಸಹಾಯ ಮಾಡಲು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಮು. ಮಾ. 2 ರಿಂದ 4 ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ ಅಲ್ಲ. ಮು. ಮಾ. 2 ಭಟ್ಕಳದ ಮಾರ್ಕೆಟ್ ನಲ್ಲಿ ದೊರೆಯುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮು. ಮಾ. 2 ಹೊಸ ಚಾಕು ಎಂದರೆ ಸರಿ ಅಲ್ಲ. ಮು. ಮಾ. 2 ನ್ನು ಜಪ್ತು ಪಡಿಸಿಕೊಂಡಾಗ ಅದರ ಮೇಲೆ ರಕ್ತದ ಕಲೆಗಳು ಇಲ್ಲ ಎಂದರೆ, ಸಾಕ್ಷಿಯು ಆರೋಪಿ ಈ ಮೊದಲೇ ಅದನ್ನು ನೀರಿನ ಹೊಂಡದಲ್ಲಿ ತೊಳೆದಿದ್ದ ಎಂದು ನುಡಿಯುತ್ತಾರೆ. ನಿಪಿ 7 ರಲ್ಲಿ ಯಾವುದೇ ನೀರಿನ ಹೊಂಡ ಇಲ್ಲ ಎಂದರೆ ಸರಿ ಅಲ್ಲ. ನಿಪಿ 5 ರಲ್ಲಿ ಚಾಕು ಪೋಲೀಸರ ಕೈಯಲ್ಲಿ ಇರುತ್ತದೆ ಎಂದರೆ ಸರಿ. ಮು. ಮಾ. 2 ಮತ್ತು 3 ನ್ನು ಮು. ಮಾ. 4 ರಲ್ಲಿ ಸುತ್ತಿಟ್ಟಿರಲಿಲ್ಲ ಎಂದರೆ ಸರಿ ಅಲ್ಲ. ಪೋಲೀಸರ ಮಾತು ಕೇಳಿ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ –ಇಲ್ಲ–**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ

ಸಹಿ ಇದೆ/-

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ